# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಮಾನ್ಯ ಸದಸ್ಯರ ಹೆಸರು | : ಶ್ರೀ ಸಿ.ಟಿ.ರವಿ (ವಿಧಾನಸಭೆಯಿಂದ ಚುನಾಯಿತರಾದವರು) |
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : **329** |
| ಉತ್ತರಿಸಬೇಕಾದ ದಿನಾಂಕ | : 13.08.2025 |
| ಉತ್ತರಿಸಬೇಕಾದ ಸಚಿವರು | : ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಕಳೆದ 5 ವರ್ಷದಿಂದ ವಿವಿಧ ವಸತಿ ಯೋಜನೆಯಡಿ ನಿಗಮದ ತಂತ್ರಾಂಶದಲ್ಲಿ Not OK ಆಗಿರುವ ಮನೆಗಳ ಸಂಖ್ಯೆ ಎಷ್ಟು; ಯಾವ ಯಾವ ಕಾರಣಗಳಿಗಾಗಿ Not ok ಆಗಿವೆ; (ಜಿಲ್ಲಾವಾರು ಮಾಹಿತಿ ಒದಗಿಸುವುದು). | ಕಳೆದ 5 ವರ್ಷದಿಂದ ವಿವಿಧ ವಸತಿ ಯೋಜನೆಯಡಿ ನಿಗಮದ ತಂತ್ರಾಂಶದಲ್ಲಿ ಒಟ್ಟು 18444 ಮನೆಗಳು Not OK ಆಗಿರುವುದು ಕಂಡುಬಂದಿರುತ್ತದೆ.<br><br>ಜಿಪಿಎಸ್ ಆಧಾರಿತ ಭೌತಿಕ ಪ್ರಗತಿಯನ್ನು ಪರಿಶೀಲಿಸುವಾಗ ಈ ಕೆಳಕಂಡ ಕಾರಣಗಳಿಂದ Not Ok ಆಗಿರುವುದರಿಂದ ಫಲಾನುಭವಿಗಳ ಅನುದಾನ ಬಿಡುಗಡೆಯನ್ನು ತಡೆಹಿಡಿಯಲಾಗುತ್ತಿದೆ:<br><br>1. **ನಿಗದಿಪಡಿಸಿದ ಘಟಕವೆಚ್ಚ ಮೀರಿ ನಿರ್ಮಿಸಿದ ಮನೆ:** ನಿಯಮಾನುಸಾರ ಸರ್ಕಾರವು ಪ್ರತಿ ಮನೆಗೆ ನೀಡುವ ಸಹಾಯಧನದ ಜೊತೆಗೆ ಫಲಾನುಭವಿಗಳ ಸ್ವಂತ ವಂತಿಕೆ ಹಣವು ಸಹಾಯಧನದ ನಾಲ್ಕು ಪಟ್ಟು ಮೀರದಂತೆ ಅನುದಾನವನ್ನು ಉಪಯೋಗಿಸಿಕೊಂಡು ಮನೆ ನಿರ್ಮಿಸಿಕೊಳ್ಳಲು ಅವಕಾಶ ನೀಡಲಾಗಿದೆ ಕೆಲವು ಫಲಾನುಭವಿಗಳು ಸದರಿ ಮೊತ್ತವನ್ನು ಮೀರಿ ನಿರ್ಮಿಸಿಕೊಂಡಿರುವ ಮನೆಗಳಿಗೆ ಫಲಾನುಭವಿಗಳ ಅನುದಾನವನ್ನು ತಡೆಹಿಡಿಯಲಾಗಿದೆ.<br>2. **ಮನೆ ವಿಸ್ತರಣೆ:** ವಾಸಕ್ಕೆ ಈಗಾಗಲೇ ಸ್ವಂತ ಮನೆ ಹೊಂದಿರುವ ಫಲಾನುಭವಿಯು ತನ್ನ ಮನೆಯನ್ನು ವಿಸ್ತರಣೆ ಮಾಡಿಕೊಳ್ಳುತ್ತಿರುವ ಫಲಾನುಭವಿಗಳ ಅನುದಾನವನ್ನು ತಡೆಹಿಡಿಯಲಾಗಿದೆ.<br>3. **ಹಳೇ ಮನೆ ಅಥವಾ ಹಂತವಾರು ಛಾಯಾ ಚಿತ್ರಗಳ ಅವಶ್ಯಕತೆ:** ಸುಮಾರು ವರ್ಷದ ಹಿಂದೆ ನಿರ್ಮಿಸಿರುವ ಹಳೇ ಮನೆಗಳನ್ನು ಜಿಪಿಎಸ್‌ಗೆ ಅಳವಡಿಸಿರುವ ಕಾರಣ ಮತ್ತು ಮನೆ ನಿರ್ಮಾಣಕ್ಕೆ ಸಂಬಂಧಪಟ್ಟಂತೆ 4 ಹಂತದ ಜಿ.ಪಿ.ಎಸ್. ಛಾಯಾ ಚಿತ್ರಗಳನ್ನು ಅಳವಡಿಸದೆ, ಹಾಲಿ ಇರುವ ಮನೆಯನ್ನೇ ಜಿ.ಪಿ.ಎಸ್.ಗೆ ಅಳವಡಿಸಿರುವ ಕಾರಣ ಫಲಾನುಭವಿಗಳ ಅನುದಾನವನ್ನು ತಡೆಹಿಡಿಯಲಾಗಿದೆ.<br>4. **ವಸತಿಯೇತರ ಉದ್ದೇಶಕ್ಕಾಗಿ ನಿರ್ಮಿಸಿ ಕೊಂಡಿರುವುದು:** ನಿರ್ಮಿಸುತ್ತಿರುವ ಮನೆಯನ್ನು ವಸತಿಯೇತರ ಉದ್ದೇಶಕ್ಕಾಗಿ ಬಳಸಿಕೊಳ್ಳುತ್ತಿರುವುದಾಗಿ ಕಂಡುಬಂದ ಫಲಾನುಭವಿಗಳ ಅನುದಾನವನ್ನು ತಡೆಹಿಡಿಯಲಾಗಿದೆ.<br><br>ಈ ಮೇಲೆ ತಿಳಿಸಿದ ಪ್ರಕರಣಗಳಲ್ಲಿ ಒಂದು ವೇಳೆ ವಾಸ್ತವಿಕವಾಗಿ ನಿರ್ಮಾಣ ಗೊಂಡಿರುವ ಮನೆಯು ಅರ್ಹವಿರುವುದು ಕಂಡುಬಂದಲ್ಲಿ, ಸ್ಥಳೀಯ ಸಂಸ್ಥೆ/ತಾಲ್ಲೂಕು ಮಟ್ಟದ ಅಧಿಕಾರಿಗಳ ದೃಢೀಕರಣದೊಂದಿಗೆ, ನಿಗದಿತ ನಮೂನೆಯಲ್ಲಿ ಪ್ರಸ್ತಾವನೆಯನ್ನು ಜಿಲ್ಲಾಡಳಿತವು ಆನ್‌ಲೈನ್ ನಲ್ಲಿ DSC ಮೂಲಕ ಅನುಮೋದಿಸಿ ರಾಜೀವ್ ಗಾಂಧಿ ವಸತಿ ನಿಗಮಕ್ಕೆ ಸಲ್ಲಿಸುತ್ತಿದ್ದು, ಸದರಿ ಪ್ರಸ್ತಾವನೆಗಳನ್ನು ನಿಗಮವು ಪರಿಶೀಲಿಸಿ ಅನುದಾನವನ್ನು ಫಲಾನುಭವಿಗಳ ಖಾತೆಗೆ ಬಿಡುಗಡೆಗೊಳಿಸಲು ಕ್ರಮವಹಿಸಲಾಗುತ್ತಿದೆ. |

| | | |
|---|---|---|
| ಆ) | Not ok ಆ ಮನೆಗಳನ್ನು ಪರಿಶೀಲಿಸಿ ನಂತರ ok ಮಾಡಿ ಬಿಲ್ ಪಾವತಿಸಿರುವ ಮನೆಗಳ ಸಂಖ್ಯೆ ಎಷ್ಟು; (ಜಿಲ್ಲಾವಾರು ಮಾಹಿತಿ ಒದಗಿಸಿ ಹಾಗೂ ಚಿಕ್ಕಮಗಳೂರು ಜಿಲ್ಲೆಯ ಮಾಹಿತಿಯನ್ನು ತಾಲ್ಲೂಕುವಾರು ಒದಗಿಸುವುದು). | ಕಳೆದ 5 ವರ್ಷದಿಂದ ವಿವಿಧ ವಸತಿ ಯೋಜನೆಯಡಿ Not ok ಆದ ಮನೆಗಳಿಗೆ ಜಿಲ್ಲೆಯಿಂದ ಸಲ್ಲಿಸಲಾದ ಪ್ರಸ್ತಾವನೆಯನ್ನು ಪರಿಶೀಲಿಸಿ ನಂತರ ok ಮಾಡಿರುವ 10147 ಮನೆಗಳಿಗೆ ಅನುದಾನ ಬಿಡುಗಡೆಮಾಡ ಲಾಗಿದೆ. ಜಿಲ್ಲಾವಾರು ಮಾಹಿತಿಯನ್ನು **ಅನುಬಂಧ-1** ರಲ್ಲಿ ಹಾಗೂ ಚಿಕ್ಕಮಗಳೂರು ಜಿಲ್ಲೆಯ ಮಾಹಿತಿಯನ್ನು ತಾಲ್ಲೂಕುವಾರು **ಅನುಬಂಧ-2** ಒದಗಿಸಲಾಗಿದೆ. |
| ಇ) | Not ok ಆದ ಮನೆಗಳನ್ನು ಪರಿಶೀಲಿಸಿ ನಂತರ ok ಮಾಡಲು ಇರುವ ಮಾನದಂಡಗಳೇನು; | Not ok ಆದ ಮನೆಗಳನ್ನು ಪರಿಶೀಲಿಸಿ ನಂತರ ok ಮಾಡಲು ಇರುವ ಮಾನದಂಡಗಳು ಇಂತಿದೆ:-<br><br>ನಿಗಮದಲ್ಲಿ ವಿವಿಧ ವಸತಿ ಯೋಜನೆಗಳಡಿ ನಿರ್ಮಿಸಿದ ಮನೆಗಳನ್ನು ಆಡಿಟ್ ವಿಭಾಗದಲ್ಲಿ ನಾಟ್ ಒಕೆ ಆದ ಮನೆಗಳು ಒಂದು ವೇಳೆ ಅರ್ಹವಿದ್ದಲ್ಲಿ ಅಂತಹ ಮನೆಗಳ ದೃಢೀಕರಣವನ್ನು ನಿಗಮವು ನಿಗದಿಪಡಿಸಿರುವ ನಮೂನೆಯಲ್ಲಿ ಪಿಡಿಒ ಮತ್ತು ತಾಲ್ಲೂಕು ನೋಡಲ್ ಅಧಿಕಾರಿಗಳು ದೃಢೀಕರಿಸಿ ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯ ನಿರ್ವಹಣಾಧಿಕಾರಿಗಳ ಡಿಎಸ್‌ಸಿ ಮೂಲಕ ಪ್ರಸ್ತಾವನೆಯನ್ನು ಪಡೆದು ನಿಗಮದಲ್ಲಿ ಪರಿಶೀಲಿಸಿ ಫಲಾನುಭವಿಗಳಿಗೆ ಅನುದಾನವನ್ನು ಬಿಡುಗಡೆ ಮಾಡಲಾಗುತ್ತಿದೆ. |
| ಈ) | ವಿವಿಧ ವಸತಿ ಯೋಜನೆಯಡಿ ಮನೆ ನಿರ್ಮಿಸಿಕೊಂಡಿರುವ ಫಲಾನುಭವಿಗಳಿಗೆ ಸಕಾಲದಲ್ಲಿ ಬಿಲ್ಲು ಪಾವತಿಯಾಗದೆ ಸಮಸ್ಯೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದರೆ, ಫಲಾನುಭವಿಗಳಿಗೆ ಸಕಾಲದಲ್ಲಿ ಬಿಲ್ಲು ಪಾವತಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು? | ವಿವಿಧ ವಸತಿ ಯೋಜನೆಗಳಡಿ ಅನುಮೋದನೆಗೊಂಡು ನಿರ್ಮಾಣ ಹಂತದಲ್ಲಿರುವ ಮನೆಗಳ ಅರ್ಹ ಫಲಾನುಭವಿಗಳ ಜಿಪಿಎಸ್ ಭೌತಿಕ ಪ್ರಗತಿಗನುಗುಣವಾಗಿ ಆಧಾರ್ ಜೋಡಣೆಗೊಂಡ ಫಲಾನುಭವಿಗಳ ಬ್ಯಾಂಕ್ ಖಾತೆಗಳಿಗೆ ನೇರವಾಗಿ ಅನುದಾನವನ್ನು ಬಿಡುಗಡೆ ಮಾಡಲಾಗುತ್ತಿದೆ. ಪ್ರಸ್ತುತ ಬಸವ ವಸತಿ ಯೋಜನೆಯಡಿ ರೂ.81.25ಕೋಟಿ ಗಳನ್ನು ಬಿಡುಗಡೆ ಮಾಡಿ ಆದೇಶ ಹೊರಡಿಸಲಾಗಿದ್ದು, ಪಿ.ಡಿ ಖಾತೆಗೆ ಅನುದಾನ ಜಮೆಯಾದ ಕೂಡಲೇ ಅರ್ಹ ಫಲಾನುಭವಿಗಳಿಗೆ ಅನುದಾನ ಬಿಡುಗಡೆಗೆ ಕ್ರಮ ವಹಿಸಲಾಗುವುದು. |

ಸಂಖ್ಯೆ: ವಇ 323 ಹೆಚ್‌ಎಎಂ 2025

(ಬಿ.ಜೆಡ್. ಜಮೀರ್ ಅಹ್ಮದ್‌ಖಾನ್)
ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ
ಕಲ್ಯಾಣ ಸಚಿವರು

LCQ 329 Annexure-1

| Sl No. | District | Beneficiaries Count |
|---|---|---|
| 1 | Bagalkot | 266 |
| 2 | Ballari | 57 |
| 3 | Belagavi | 931 |
| 4 | Bengaluru Rural | 160 |
| 5 | Bengaluru Urban | 19 |
| 6 | Bidar | 170 |
| 7 | Chamarajanagar | 119 |
| 8 | Chikkaballapur | 229 |
| 9 | Chikkamagaluru | 746 |
| 10 | Chitradurga | 427 |
| 11 | DakshinaKannada | 32 |
| 12 | Davanagere | 501 |
| 13 | Dharwad | 91 |
| 14 | Gadag | 139 |
| 15 | Hassan | 541 |
| 16 | Haveri | 282 |
| 17 | Kalaburagi | 180 |
| 18 | Kodagu | 25 |
| 19 | Kolar | 102 |
| 20 | Koppal | 120 |
| 21 | Mandya | 374 |
| 22 | Mysuru | 416 |
| 23 | Raichur | 111 |
| 24 | Ramanagara | 1375 |
| 25 | Shivamogga | 231 |
| 26 | Tumakuru | 762 |
| 27 | Udupi | 831 |
| 28 | UttaraKannada | 94 |
| 29 | Vijayanagara | 42 |
| 30 | Vijayapura | 532 |
| 31 | Yadgiri | 242 |
|  | Grand Total | 10147 |

Gandhi Housi...

LCQ-329

Annexure-II

| Sl No. | Taluk | Beneficiaries Count |
|---|---|---|
| 1 | Ajjampura | 35 |
| 2 | Chikkamagaluru | 66 |
| 3 | Kadur | 582 |
| 4 | Koppa | 8 |
| 5 | Mudigere | 5 |
| 6 | Narasimharajapura | 16 |
| 7 | Sringeri | 6 |
| 8 | Tarikere | 28 |
| | **Grand Total** | 746 |

Rajiv Gandhi Housing Corporation Ltd. Bengaluru